127(a)

"SATYAVADI" Founded 1917 Regd. No. M. 1209

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 19] ಗುರುವಾರ 4—10—45 [ಬಿಡಿ ಪ್ರತಿ 3 ಪೈ

ಉಪನ್ಯಾಸ

ಮೈಸೂರು ಸಿಟಿ ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಅಹೋಬಿಲ ಮಠದಲ್ಲಿ ತಾ 6-10-45 ನೇ ಶನಿವಾರ ಸಾಯಂಕಾಲ 6 ಗಂಟೆಗೆ ಶ್ರೀ ಪಂಡಿತ ವಿದ್ವಾನ್ ಅತ್ತಿಕೂರು ದೀಕ್ಷಾರ್ಯರಿಂದ 'ಶ್ರೀಭಾಷ್ಯಕಾರ್ಯ ವೈಭವ' ಎಂಬ ಎಂಬ ವಿಷಯವಾಗಿ ಉಪನ್ಯಾಸ ನಡೆಯುತ್ತದೆಂದೂ, ಸರ್ವರೂ ದಯವಾಡಿ ಸಬೇಕೆಂದೂ ಶ್ರೀ ವೆಂಕಟೇಶ ಸಭೆಯವರು ವಿನಂತಿ ಮಾಡಿಕೊಂಡಿದ್ದಾರೆ.

o o

ಟ್ಯಾಗಟ್ಲಿ ಸಕ್ಕರೆ

ಜಾವಾದ ಬಂದರುಗಳಲ್ಲಿ 15 ಲಕ್ಷ ಟನ್ ಸಕ್ಕರೆ ಸಿಕ್ಕಿರುವುದಾಗಿಯೂ ಇದನ್ನು ಮಿತ್ರ ರಾಷ್ಟ್ರಗಳ ಸಂಗ್ರಹಕ್ಕೆ ಸೇರಿಸಿ ಸಂಯುಕ್ತ ಸಂಸ್ಥಾನಕ್ಕೆ ಸಾಗಿಸಲಾಗುವುದೆಂದೂ ವರದಿಯಾಗಿದೆ.

o o

ಪರಿಹಾರವಾಗಲಿಲ್ಲ

ಲಂಡನ್ನಿನಲ್ಲಿ ನಡೆದ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ಮುಗಿಯಿತು. ಅವರಲ್ಲಿನ ಭಿನ್ನಾಭಿಪ್ರಾಯವೇನೂ ವ್ಯವಸ್ಥೆಯಾಗಲಿಲ್ಲ ಸುತ್ತೆ ಈ ಬಿಕ್ಕಟ್ಟು ನಿವಾರಣೆಗೆ ತ್ರಿಮೂರ್ತಿಗಳ ಸಮ್ಮೇಳನ ಆಗುವುದೆಂದು ನಿರೀಕ್ಷಿಸಲಾಗಿದೆ.

ತುಮಕೂರಿನ ಪೌರಸಭೆಯವರು ತಾ|| 1 ರಲ್ಲಿ ನಡೆದ ಮಿಂಟಿಂಗಿನಲ್ಲಿ ಶ್ರೀ ಸಿದ್ಧಗಂಗಾ ಪ್ರೌಢ ಶಾಲಾ ಕಟ್ಟಡ ನಿಧಿಗೆ ರೂ. 500/ ಕೊಡಲು ತೀರ್ಮಾನ ಮಾಡಿರುವರು.

o o

ಅಖಿಲ ಭಾರತ ಸಂಸ್ಕೃತ ಸಮ್ಮೇಳನವು ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವುದೆಂದು ತಿಳಿಯಬಂದಿದೆ.

o o

ಫ್ರೆಂಚ್ ಆಫ್ರಿಕಾದಿಗಳೂ ಅನಾಂ ಮುಖಂಡರೂ ನಡೆಸಿದ ಸಮಾಲೋಚನೆ ಫಲವಾಗಿ ದಕ್ಷಿಣ ಇಂಡೋ ಚೈನಾದಲ್ಲಿ ಕದನ ನಿಲ್ಲಿಸಲು ಒಪ್ಪಂದವಾಗಿದೆ.

o o

ಬೊಂಬಾಯಿನ ವಾರ್ತೆಯಂತೆ 14 ಜನರ ಮೇಲೆ ಕಾಂಗ್ರೆಸ್ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

o o

ಮಿಡ್ನಾಪುರದಲ್ಲಿ 1942 ರಲ್ಲಿ ಸುಂಟರ ಗಾಳಿ ಹಾವಳಿಯಿಂದ 40 ಸಾವಿರ ಮಂದಿ ಸಾವಿಗೆ ತುತ್ತಾದರೆಂದು ರಾಮಕೃಷ್ಣಾ ಮಿಷನ್ನಿನವರ ಮರದಿ.

ಯಹೂದರು ಗಾಂಧೀಜೀಯವರ ಅಸಹಕಾರ ಚಳುವಳಿ ಹೂಡುವರೆ?

ಲಂಡನ್ ಅ 1— ಅಮೇರಿಕಾದ ಯಹೂದ್ಯ ಮುಖಂಡರು ಗಾಂಧೀಜಿಯವರು ಅಸಹಕಾರ ಚಳವಳಿಯಂತೆ ತಾವೂ ಹೂಡಬೇಕೆಂದು ಯೋಚಿಸಿದ್ದಾರೆ ನ್ಯೂಯಾರ್ಕಿನ ಒಂದು ವಾರ್ತೆಯಂತೆ ಅಮೇರಿಕಾ ಜಿಯೋಸಿಸ್ಟ್ ಸಂಘಾಧ್ಯಕ್ಷರು ಪ್ರಪಂಚದ ಎಲ್ಲಾ ಯಹೂದಿಗಳೂ ಬ್ರಿಟಿಷ್ ಸಾಮಾನುಗಳ ಬಹಿಷ್ಕಾರ ಪ್ರಾರಂಭಿಸುವಂತೆ ತಿಳಿಸಿರುವುದಾಗಿಯೂ, ಪ್ಯಾಲಿಸ್ಟೈನಿನಲ್ಲಿಯ ಯಹೂದ್ಯರು ಅಸಹಕಾರ ಚಳವಳ ಪ್ರಾರಂಭಿಸುವುದಾಗಿ ಘೋಷಿಸಬೇಕೆಂದೂ ಸೂಚಿಸಿರುವರೆಂದೂ ತಿಳಿಯಬಂದಿದೆ.

ಇಂಡೋಚೀನಾದ ಭೂಗಾರವು ಜಪಾನ್ ಬ್ಯಾಂಕಿನಲ್ಲಿರುವುದು ಪತೆಯಾಗಿದೆ.

ಭಾರತವು ಇನ್ನೆರಡು ವರ್ಷಗಳಲ್ಲಿ ಸ್ವತಂತ್ರವಾಗುವುದೆಂದು ಶ್ರೀ ಜವಹರಲಾಲರು ಅಲಹಾಬಾದಿನಲ್ಲಿ ಗಾಂಧೀ ಜಯಂತಿ ಕಾಲದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು.

ಗಾಂಧೀಜಿಯವರು ಡಿಸೆಂಬರಿನಲ್ಲಿ ದಕ್ಷಿಣ ಭಾರತಕ್ಕೆ ಭೇಟಿ ಕೊಡುವಾಗ ಮಧುರಾ ಮತ್ತು ಪಲನಿಯಲ್ಲಿನ ದೇವಾಲಯಗಳಿಗೂ ಭೇಟಿ ಕೊಡುವರೆಂದೂ ತಿಳಿಯಬಂದಿದೆ

ಸೂಚನೆ— ಮಹಾಲಯ ಅಮಾವಾಸ್ಯೆ ಪ್ರಯುಕ್ತ, ನಾಳೆ ಪತ್ರಿಕೆಗೆ ರಜಾ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಬಂಗ್ಲಾ ಸೈಟುಗಳನ್ನು ತಾರೀಖು 12-9-1945 ನೇ ಹರಾಜು ಇಷ್ತಿಹಾರ್‌ನಾಮೆಯ ಷರತ್ತು ಪ್ರಕಾರ ತಾರೀಖು 20-10-1945 ರಿಂದ 23-10-1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಜಾಂಭೋರೆ
ಛೇರ್ಮನ್

ದಸರಾ ಮಹೋತ್ಸವ

೭ನೇ ತಾರೀಖು ಪಾಡ್ಯಮಿ ದಿವಸ ಶ್ರೀಮನ್ಮಹಾರಾಜರವರು ಶಾಸ್ತ್ರೋಕ್ತವಾಗಿ ಪದ್ಧತಿ ಪ್ರಕಾರ ನಡೆಯುವ ಶಾಸ್ತ್ರಗಳನ್ನು ಪೂರೈಸಿಕೊಂಡು ಬೆಳಿಗ್ಗೆ ೧೧-೩೦ ಘಂಟೆಗೆ ದರ್ಬಾರ್ ಹಾಲಿಗೆ ದಯಮಾಡಿಸುವರು. ಸಿಂಹಾಸನ ಪೂಜೆಗಳು ಜರಿಗೆದನಂತರ ೧೨ ಘಂಟೆಗೆ ಸಿಂಹಾಸನಾರೋಹಣ ಮಾಡುವರು. ದಿವಾನರು, ಪ್ರೈವೇಟ್ ಸೆಕ್ರಟರಿಗಳು, ವೈಸ್‌ಛಾನ್ಸಲರ್, ಶಾಸನ ಸಭಾಧ್ಯಕ್ಷರು, ಹುಜೂರು ಸೆಕ್ರಟರಿಗಳು, ಸರ್ದಾರರುಗಳು ಮತ್ತು ಅರಸುಗಳಿಂದ ನಜರುಗಳನ್ನು ಸ್ವೀಕರಿಸುವರು. ರಾತ್ರೆ ೮ ಘಂಟೆಗೆ ದರ್ಬಾರ್ ನಡೆಯುವುದು. ಅಕ್ಟೋಬರ್ 16 ನೇ ತಾರೀಖು ಬಂಬೂಸವಾರಿ ಜರುಗುವುದು.

o o

ಆಕ್ಟೀ ರಾಗಿ

ಕಳೆದ ಮಾಹೆ ೩೦ ರಲ್ಲಿ ಚಿತ್ರದುರ್ಗದಲ್ಲಿ ಸೇರಿದ್ದ ಆಹಾರ ಸಮ್ಮೇಳನದಲ್ಲಿ ಶ್ರೀ ಬಸಪ್ಪನವರೂ ನುತ್ತು ಶ್ರೀ ಈಶ್ವರಪ್ಪನವರೂ ಹೂಳ್ಕೆರೆಯಲ್ಲಿ ರಾಗಿ ಮತ್ತು ಜೋಳವಿಲ್ಲವೆಂದೂ ಜೇಪೆಡೆಯಿಂದ ತರಿಸಿ ಹಂಚಬೇಕೆಂದೂ ಕೇಳಿದರು.

o o

ಜೋಳಕ್ಕೆ ಮಗು ಮಾರಾಟ

ಕೇವಲ ಐವತ್ತು ಸೇರು ಜೋಳಕ್ಕಾಗಿ ಚೆನ್ನಗಿರಿ ತಾಲ್ಲೂಕು ತ್ಯಾವಣಿಗ್ರಾಮದಲ್ಲಿ ಹನುಮಂತಪ್ಪನೆಂಬಾತನು ಬೇರೊಬ್ಬನಿಗೆ ತನ್ನ ಮಗುವನ್ನು ಮಾರಿದನೆಂಬ ವರದಿ ವಿಷಯದಲ್ಲಿ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸಕಾರಣ ತಿಳಿಯಲು ವಿಚಾರಣೆ ನಡೆಸುವುದಾಗಿ ವರದಿಯಾಗಿದೆ.

No. R-1-60/45-46

ಮೈಸೂರು ಸಿಟಿ ರೇಷನಿಂಗ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಮೊಹಲ್ಲಾ ಸಬ್ ಗೋಡೌನುಗಳೂ, ಸರಕಾರೀ ರೇಷನ್ ಡಿಪೋಗಳೂ ಮತ್ತು ಎಲ್ಲಾ ಇತರೇ ರೇಷನ್ ಡಿಪೋಗಳೂ ಸಹಾ ಇದೇ ಮಾಹೆ 5 ನೇ ತಾರೀಖು ಶುಕ್ರವಾರ 'ಮಹಾಲಯ ಅಮಾವಾಸ್ಯೆ' ಪ್ರಯುಕ್ತ ಬೆಳಿಗ್ಗೆ ಮುಚ್ಚಲ್ಪಡುತ್ತವೆ. ಆದಿವಸ ಮಧ್ಯಾಹ್ನ ಮಾಮೂಲಿನಂತೆ ಡಿಪೋಗಳೆಲ್ಲಾ ತೆರೆದಿರುತ್ತವೆ.

(ಸಹಿ) ಟಿ. ವಿ. ರೆಡ್ಡಿ
3-10-45 ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಬಾಪುವಿನ ಹುಟ್ಟುದಿನ

.....

(ಮುಂದುವರಿದುದು)

ಭಾರತೇತಿಹಾಸದ ಸುವರ್ಣಗಳಿಗೆಗಳಲ್ಲಿ ಒಂದು. ಅದನ್ನು ಅತ್ಯಂತ ಯಶಸ್ವಿಯಾಗಿ ಆಚರಿಸುವುದು ನಮ್ಮ ಕರ್ತವ್ಯ ಬಾಪುವಿನ ಬಾಳುವೆಯು ಎಪ್ಪತ್ತಾರು ವರ್ಷಗಳು. ಎಪ್ಪತ್ತಾರು ಗಳಿಗೆಗಳಂತೆ ಕಳೆದುಹೋಗಿವೆ. ಭಾರತದ ನಾಲ್ಪತ್ತ ಕೋಟಿಯ ತೃಡೀಕಾಲನಾದರೂ, ಅವರು ಚಿರಾಯುವಾಗುವರು! ಅದರೆ ಅದು ಸಾಧ್ಯವೆ?

ಮಹಾತ್ಮರ ಜೀವಿತದ ಚಣಚಣವೂ ನಮ್ಮ ಸಂಸ್ಕಾರಕ್ಕಾಗಿ, ನಮ್ಮ ಬಾಳುವೆಯ ರೂಪರೇಖೆಯ ಚಿತ್ರಕ್ಕಾಗಿ ಸ್ಫೂರ್ತಿಯವಾಗಿದೆ. ನಮ್ಮ ಜೀವನದಲ್ಲಿ ಜವರವಾದ ಬೆಳಕನ್ನು ಬೆಳಗಿಸಿದವು. ಅವರು 'ನಗ್ನ ಫಕೀರ' ರೆನಿಸಿದರು ಗಾಂಧೀಜಿ ಅವರು ಕ್ರೈಸ್ತ – ಕೃಷ್ಣ – ಬುದ್ಧ – ಮಹಮ್ಮದರಂತೇ ಚಿರಾಯುಷ್ಯರ್ಜಿಸಿದ್ದಾರೆ. ಅವರ ಸೇವೆಯು ನಮಗೊಂದು ಹೆಮ್ಮೆ–ನಾಡಿಗೊಂದು ಜೀವ. ಅವರ ಹುಟ್ಟು ದಿನವು ಪ್ರತಿಯೊಬ್ಬ ಭಾರತೀಯನ ಮನೆಮನೆಯ ಹಬ್ಬವಾಗಬೇಕು. ಅದು ನಮ್ಮ ಜೀವನ ಸಂತಸದ ಕರ್ತವ್ಯಪೂರಿತವಾದ ದಿನವಾಗಬೇಕು — ಖಾಧೀ ಪ್ರಚಾರ ಗಾಂಧೀ ತತ್ವಬೋಧನೆ ಹರಿಜನ ಸೇವೆ ಅಹಿಂಸಾ ಪ್ರಚಾರದಿದ್ದೃವ್ರತಬದ್ಧರಾಗಿ ಅದನ್ನು ನಡೆಸಬೇಕು

———

ಲಂಚ ಕೊಟ್ಟವರಿಗೆ ಶಿಕ್ಷೆ

ಆಗ್ರಾ ಆ 3— ಮಂಗಳಸೇ ಚಂದ್ರಭಾರ್ ಅಂಗಡಿಯ ಪ್ರತಿನಿಧಿಗಳಾದ ಚಂದ್ರಭಾರ್ ಮತ್ತು ಫೂಲ್‌ಚಂದ್ ಇವರು ತನ್ನ ಸರಕನ್ನು ಸುಲಭವಾಗಿ ಒಪ್ಪಿಸಲು ವಿಲಿಟರ್‌ಗಾಡಿಯ ಸಾರ್ಜೆಂಟ್‌ಗೆ 100 ರೂ. ಲಂಚ ಕೊಡಲು ಪ್ರಯತ್ನಿಸಿದರು. ಹಣ ಪಾವತಿ ಮಾಡುತ್ತಿದ್ದಾಗ ಅವರನ್ನು ಪೋಲೀಸಿನವರು ಹಿಡಿದು ತನಿಖೆ ಮಾಡಿದರು. ಇಬ್ಬರಿಗೂ ತಲಾ 4 ತಿಂಗಳು ಕಠಿಣ ಶಿಕ್ಷೆ ಮತ್ತು ರೂ. 250 ದಂಡ ವಿಧಿಸಲಾಯಿತು (ಐ ಪಿ)

TALK–A–TONE

(Fioneer Film-mag of S. India)
Local Agent—D. M[illegible]
Opera Talkies, Mysore

AT Opera—

ZAMIN

ದುರ್ಗಾ ಖೋಟೆ, ಕುರ್ಶಿದ್, ನಾಜಿಮ್ ಡೆವಿಡ್ ಪಾತ್ರವಹಿಸಿರುವ

ಜಮೀನ್

ಮುಂದಿನವಾರ ನೋಡಿ –

ರಂಜನ್, ಟಿ ಆರ್, ರಾಜಕುಮಾರಿ ಕೆ. ಎಲ್. ವಿ. ವಸಂತ, ಕೃಷ್ಣ, ವಧೂರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

At Ranjit

Humayun

4 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂರ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್ ವೀಣಾ, ನರ್ಗಿಸ್,, ಷಾ ನವಾಸ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore



ಐ. ಜೆ. ಹಾಲ್

ರನ್ನೇ ಬೀದಿ — ಮೈಸೂರು

ಬರ್ಕ್‌ಟೀಸ್‌ಗೇರ್ಡ್ ಮೇಲೆ ಆರ್ ಎ. ಎಫ್ ಧಾಳಿ

ನಮ್ಮ ಆರೋಗ್ಯ ಆನಂದದಾಯಕ



ಜೀವಿತ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲ್ಲ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಗಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಕ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.